ಎಂ ವಿ ಸಿ ನಂ. 444/2024 ಪಿಡಬ್ಲೂ : 1

ದಿನಾಂಕಃ 10-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಬಿ ಡಿ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

ಸಾಕ್ಷಿ ಪ್ರಥಮ ವರ್ತಮಾನ ವರದಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ -1 ಎಂದು, ಪಂಚನಾಮೆಯ ದೃಡೀಕೃತ ನಕಲನ್ನು ನಿಪಿ-2 ಎಂದು, ದೂರಿನ ದೃಡೀಕೃತ ನಕಲನ್ನು ನಿಪಿ-3 ಎಂದು, ಐ ಎಂ ವಿ ವರದಿಯ ದೃಡೀಕೃತ ನಕಲನ್ನು ನಿಪಿ -4 ಎಂದು, ಗಾಯದ ಪ್ರಮಾಣ ಪತ್ರ ದೃಡೀಕೃತ ನಕಲನ್ನು ನಿಪಿ-5 ಎಂದು, ಅಪಘಾತದ ಕಚ್ಚಾ ನಕಾಶೆಯನ್ನು ನಿಪಿ-6 ಎಂದು, ಕಲಂ 133 ಎಂ ವಿ ಆಕ್ಟ್ ರಡಿ ನೀಡಿದ ನೋಟಿಸಿಗೆ ಉತ್ತರದ ದೃಡೀಕೃತ ನಕಲನ್ನು ನಿಪಿ -7 ಎಂದು, ಕಲಂ 133 ಎಂ ವಿ ಆಕ್ಟ ರಡಿ ನೀಡಿದ ನೋಟಿಸಿನ ದೃಡೀಕೃತ ನಕಲನ್ನು ನಿಪಿ-8 ಎಂದು, ದೋಷಾರೋಪಣಾ ಪತ್ರ ದ ದೃಡೀಕೃತ ನಕಲು ನಿಪಿ-9 ಎಂದು, ಸಿಸಿ *1440*/2022 ರ ಆದೇಶ ಪುಟಗಳ ದೃಡೀಕೃತ ನಕಲು ನಿಪಿ-10 ಎಂದು, ಡಿಸೇಬ್ಲಿಟಿ ಕಾರ್ಡ್ ರುಜುವಾತು ಪಡಿಸುವ ಷರತ್ತಿನ ಮೇರೆಗೆ ನಿಪಿ -11 ಎಂದು, ಡಿಸೇಬ್ಲಿಟ್ ಸರ್ಟಿಫಿಕೇಟ್ ರುಜುವಾತು ಪಡಿಸುವ ಷರತ್ತಿನ ಮೇರೆಗೆ ನಿಪಿ -12 ಎಂದು ಗುರುತಿಸಲಾಯಿತು. ಸಾಕ್ಷಿ ತಮ್ಮ ಆಧಾರ ಕಾರ್ಡನ ನೋಟರಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ -13 ಎಂದು ಗುರುತಿಸಲಾಯಿತು. ( ಸಾಕ್ಷಿ ನಿಪಿ-13 ರ ಮೂಲ ಪ್ರತಿಯನ್ನು ಹಾಜರು ಪಡಿಸಿದ್ದು , ನೋಟರೈಸ್ಡ್ ಪ್ರತಿಯೊಂದಿಗೆ ತಾಳೆ ಮಾಡಿ ನೋಡಲಾಗಿದ್ದು, ಸರಿಯಿದ್ದು, ಮೂಲ ದಾಖಲಾತಿಯನ್ನು ಅರ್ಜಿದಾರರಿಗೆ ಹಿಂದಿರುಗಿಸಲಾಯಿತು)

ಅರ್ಜಿದಾರರ ವಿನಂತಿ ಮೇರೆಗೆ ಪ್ರಕರಣವನ್ನು ಮುಂದುವರೆದ ವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.